# ಕಸ ಗುಡಿಸುವ ವಾಹನಗಳು!



ನಮ್ಮ ನಗರಗಳ ಸ್ವಚ್ಛತೆಗೆ, ಅವುಗಳ ಗಾತ್ರಕ್ಕೆ ತಕ್ಕಂತೆ ನೂರಾರು–ಸಾವಿರಾರು ಕಸಗೂಡಿಸುವ ನೌಕರರಿರುತ್ತಾರೆ. ಆ ಕೆಲಸವನ್ನು ಕೆಲವೇ ಯಂತ್ರಗಳು ಮಾಡುವಂತಾದರೆ ಹೇಗೆ? ಹೌದು, ನಮ್ಮ ನೆರೆಯ ಚೀನಾ ದೇಶದಲ್ಲಿ ವಾಹನಗಳಿಗೆ ಅಳವಡಿಸಿದ ಯಂತ್ರಗಳು ಅಲ್ಲಿನ ಬೀದಿಗಳ ಕಸವನ್ನು ಗುಡಿಸುತ್ತವೆ. ಅದೇನೂ ಇತ್ತೀಚಿನ ಬೆಳವಣಿಗೆ ಏನಲ್ಲ. ಕಳೆದ ಹತ್ತು ವರ್ಷಗಳಿಂದ ಈ ವ್ಯವಸ್ಥೆ ಅಲ್ಲಿ ಜಾರಿಯಲ್ಲಿದೆ.

ಕಸಗುಡಿಸುವ ಪ್ರತಿ ವಾಹನದ ಹಿಂದೆ ಒಂದು ದೊಡ್ಡ ಚಕ್ರ ಇರುತ್ತದೆ. ಅದರ ಸುತ್ತಲೂ 16 ಕಸಪೊರಿಕೆಗಳನ್ನು ಜೋಡಿಸಿರುತ್ತಾರೆ. ವಾಹನ ಚಲಿಸುತ್ತಿದ್ದಂತೆಯೇ ಈ ಚಕ್ರ ತಿರುಗಲು ಪ್ರಾರಂಭಿಸಿ ಬೀದಿ ಕಸವನ್ನು ಗುಡಿಸುತ್ತದೆ. ಮನುಷ್ಯರು ಗುಡಿಸಿದಷ್ಟು ಬೀದಿಗಳು ಸ್ವಚ್ಛವಾಗುವುದಿಲ್ಲವಾದರೂ; ಸಾವಿರಾರು ಜನರ, ಹಲವಾರು ಗಂಟೆಗಳ ಶ್ರಮದ ಕೆಲಸವನ್ನು, ಈ ವಾಹನಗಳು ತೀರ ಕಡಿಮೆ ಸಮಯದಲ್ಲಿ ಮಾಡಿ ಮುಗಿಸುತ್ತವೆ ಎನ್ನುವುದು ವಿಶೇಷ.

ನಮ್ಮಲ್ಲೂ ಇಂತಹ ವಾಹನಗಳು ಬಂದರೆ ಲಕ್ಷಾಂತರ ಪೌರ ಕಾರ್ಮಿಕರ ಕೆಲಸವನ್ನು ಅಪಹರಿಸುವುದು ಗ್ಯಾರಂಟಿ. ಆದರೆ ಪೌರ ಕಾರ್ಮಿಕರ ಶ್ರಮವನ್ನು ಕಡಿಮೆ ಮಾಡುವುದಂತೂ ನಿಜ. ಜತೆಗೆ ಅತ್ಯಂತ ಕೊಳಕು ಪರಿಸರದಲ್ಲಿ ಕೆಲಸ ಮಾಡುವುದನ್ನೂ ತಪ್ಪಿಸುವಂತಾದರೆ ಚೆನ್ನ.

■ ಸುಭಾಸ ಯಾದವಾಡ






